## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎ.ಎ.ಹುಲಗೇರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ಇಲಾಖಾ ವಿಚಾರಣಾಧಿಕಾರಿಗಳು ಇವರಿಗೆ ಸಂಚಿತ ಸಂಭಾವನೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:- 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 6 ಸೇಇವಿ 2010, ದಿ:28.04.2011
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 66 ವಿಸೇಟಿ 2014, ದಿ:18.12.2014
3. ವಿಚಾರಣಾಧಿಕಾರಿಯವರ ವರದಿ ದಿ:22.06.2015

****

**ಪ್ರಸ್ತಾವನೆ:**

ಹಳಿಯಾಳ ತಾಲ್ಲೂಕು ಪಂಚಾಯತಿಯಲ್ಲಿ ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಸಿ.ಎಸ್.ಚಿಕ್ಕಮಠ (ಹಾಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶಿರಸಿ) ಇವರು ಶ್ರೀಮತಿ ಸಿದ್ದಮ್ಮ ಮಲ್ಲಪ್ಪ ಕುಂಟಿ, ಎಂಬುವವರಿಗೆ ಮಾನಸಿಕ ಕಿರುಕುಳ ನೀಡಿ, ಮೋಸ ಮಾಡಿ ಕರ್ತವ್ಯದಿಂದ ಗಳಿಸಿದ ಹಾಗೂ ಉಳಿತಾಯ ಮಾಡಿದ ಎಲ್ಲಾ ಸವಲತ್ತುಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ತಿಳಿಸುತ್ತಾ, ತಮಗೆ ಆದ ಅನ್ಯಾಯವನ್ನು ಸರಿಪಡಿಸುವಂತೆ/ಪರಿಹಾರ ಸೂಚಿಸುವಂತೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಘೋಟ್ನೇಕರ್ ಶ್ರೀಕಾಮತ ಲಕ್ಷ್ಮಣ ಇವರನ್ನು ಶ್ರೀ ಮತಿ ಸಿದ್ದಮ್ಮ ಮಲ್ಲಪ್ಪ ಕುಂಟಿ, ಇವರು ವಿನಂತಿಸಿಕೊಂಡಿದ್ದರ ಮೇರೆಗೆ ಮಾನ್ಯ ಸದಸ್ಯರು ಶ್ರೀ ಸಿ.ಎಸ್.ಚಿಕ್ಕಮಠ, ಇವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದಾಗ ಸ್ಪಂದಿಸದೇ, ಗೌರವವನ್ನು ನೀಡದೇ, ಏರು ಧ್ವನಿಯಲ್ಲಿ ಮಾತನಾಡಿದ್ದು ಹಾಗೂ ಮಾನ್ಯ ಸದಸ್ಯರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿರುವ ಕಾರಣ, ಹಾಗೂ ಇನ್ನಿತರೆ ಗಂಭೀರ ಸ್ವರೂಪದ ಆರೋಪಗಳ ಸಂಬಂಧ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11ರ ಪ್ರಕಾರ ಇಲಾಖಾ ವಿಚಾರಣೆ ಜರುಗಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಶ್ರೀ ಎ.ಎ.ಹುಲಗೇರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಸದರಿಯವರು ಪ್ರಕರಣದ ಇಲಾಖಾ ವಿಚಾರಣೆಯನ್ನು ನಡೆಸಿ, ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ದಿನಾಂಕ:22.06.2015 ರಂದು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿ, ಸಂಭಾವನೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ವಿಚಾರಣಾಧಿಕಾರಿಯವರು, ಇಲಾಖಾ ವಿಚಾರಣೆಯನ್ನು ನಡೆಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದರಿಂದ, ವಿಚಾರಣಾಧಿಕಾರಿಯವರಿಗೆ ಅವರ ನೇಮಕಾತಿ ಸಂಧರ್ಭದಲ್ಲಿ

ಚಾಲ್ತಿಯಲ್ಲಿದ್ದಂತೆ ಸಂಚಿತ ಸಂಭಾವನೆ. ಹಾಗೂ ವಾಹನ ಭತ್ಯೆಯನ್ನು ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 66 ವಿಸೇಬಿ 2014 ಬೆಂಗಳೂರು ದಿನಾಂಕ:17-08-2015</u>

ಶ್ರೀ ಎ.ಎ.ಹುಲಗೇರಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿ. ಇವರಿಗೆ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 6 ಸೇಇವಿ 2010, ದಿನಾಂಕ:28.04.2011ರ ಪ್ರಕಾರ ವಾಹನ ಭತ್ಯೆಯೂ ಸೇರಿದಂತೆ ಒಟ್ಟು ರೂ.15,000/- (ರೂ. ಹದಿನೈದು ಸಾವಿರಗಳು ಮಾತ್ರ) ಗಳ ಸಂಭಾವನೆ ಮಂಜೂರು ಮಾಡಿದೆ.

ಶ್ರೀ ಎ.ಎ.ಹುಲಗೇರಿ. ನಿವೃತ್ತ ಜಿಲ್ಲಾ ನ್ಯಾಯಾಧೀಶರು. ಹಾಗೂ ವಿಚಾರಣಾಧಿಕಾರಿಗಳು. ಇವರಿಗೆ ಸದರಿ ಮೊತ್ತವನ್ನು ಪಾವತಿಸುವ ಕುರಿತು ಕೂಡಲೇ ಅಗತ್ಯ ಕ್ರಮ ವಹಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

( ವಿ.ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ &ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಇವರಿಗೆ,</u>

1) ಮಹಾಲೇಖಪಾಲರು.(ಎ & ಇ) ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ.
3) ಶ್ರೀ ಎ.ಎ.ಹುಲಗೇರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು.
   8ನೇ ಕ್ರಾಸ್, ಶಿವಗಿರಿ, ಧಾರವಾಡ-58001
4) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿ
   (ಆಡಳಿತ) ರವರ ಆಪ್ತ ಶಾಖೆ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
5) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅಪಂ.ರಾಜ್ ಇಲಾಖೆ
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.